**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.**

**ಎಸ್.ಸಿ.ನಂ. 5002/2025**

**ಸಿ.ಡಬ್ಲ್ಯೂ–7 ಪಿ.ಡಬ್ಲ್ಯೂ–5**

**ದಿಃ 03.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಪೂರ್ಣ ಹೆಸರು | : | ಮುಜಮುಲ್ ಮುನ್ನಾ ಖಾದರಿ |
| ವಯಸ್ಸು | : | 25 ವರ್ಷ. |
| ಉದ್ಯೋಗ | : | ಸೆಂಟ್ರಿಂಗ್ ಕೆಲಸ |
| ವಾಸಸ್ಥಳ | : | ನಿಪ್ಪಾಣಿ. |

**ಮುಖ್ಯ ವಿಚಾರಣೆಃ–** ಮಾನ್ಯ ಸರಕಾರಿ ಅಭಿಯೋಜಕರವರಿಂದಃ–

1) ಚಾ.ಸಾ 6 ಗೊತ್ತಿಲ್ಲ.

2) ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲಿಸರು ಪಂಚನಾಮೆಗಾಗಿ ಕರೆದಿಲ್ಲ. ಈಗ್ಗೆ ಒಂದೂವರೆ ವರ್ಷಗಳ ಹಿಂದೆ ನಿಪ್ಪಾಣಿಯಲ್ಲಿ ಪೋಲಿಸರು ಕರೆದು ಖಾಲಿ ಹಾಳೆ ಮೇಲೆ ಸಹಿ ಪಡೆದು ಪೋಟೋ ತೆಗೆದುಕೊಂಡಿದ್ದಾರೆ.

3) ಸಾಕ್ಷಿಗೆ ವೈದ್ಯಾಧಿಕಾರಿಗಳು ಕಾಯ್ದಿರಿಸಿದವುಗಳ ಹಾಗೂ ಮೃತನ ಮೈಮೇಲಿನ ಬಟ್ಟೆ ಜಪ್ತ ಪಂಚನಾಮೆ ಮೇಲಿನ ಸಹಿ ತೋರಿಸಲಾಗಿ ನೋಡಿ

ಒಪ್ಪಿಕೊಂಡಿದ್ದು, ಸದರಿ ಪಂಚನಾಮೆಯನ್ನು ಈಗಾಗಲೇ ನಿ.ಪಿ.30 ಅಂತಾ ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿ.ಪಿ.30(ಬಿ) ಅಂತಾ ಗುರುತಿಸಲಾಯಿತು. ಅದರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವದೇ ವಸ್ತುಗಳನ್ನು ಜಪ್ತು ಮಾಡಿಕೊಂಡಿಲ್ಲ.

4) ಸಾಕ್ಷಿಗೆ ನಿ.ಪಿ.31 ಪೋಟೋ ತೋರಿಸಲಾಗಿ ತನ್ನ ಬಾವಚಿತ್ರ ನೋಡಿ ಗುರುತಿಸಿದ್ದು, ಅದನ್ನು ಯಾರು, ಎಲ್ಲಿ ಹಾಗೂ ಯಾವ ವಿಚಾರವಾಗಿ ತೆಗೆದಿದ್ದಾರೆಂದು ಗೊತ್ತಿಲ್ಲವಾಗಿ ನುಡಿಯುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಬೇಕೆಂದು ಮಾನ್ಯ ಸರಕಾರಿ ಅಭಿಯೋಜಕರು ಕೋರಿದ್ದು, ಪರಿಶೀಲಿಸಿ, ಅನುಮತಿಸಲಾಯಿತು)**

**ಪಾಟೀ ಸವಾಲುಃ- ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

1) ದಿನಾಂಕಃ 03.10.2024 ರಂದು ಸಾಯಂಕಾಲ 04.30 ರಿಂದ 05.30 ಗಂಟೆಯವರೆಗೆ ನಿಪ್ಪಾಣಿ ಶಹರ ಪೋಲಿಸರು ಠಾಣೆಯಲ್ಲಿ ಪಂಚರಾದ ನನ್ನ ಹಾಗೂ ಚಾ.ಸಾ. 6 ರವರ ಸಮಕ್ಷಮ ಚಾ.ಸಾ.48 ರವರು ವೈದ್ಯರು ಸಂಗ್ರಹಿಸಿ ಕೊಟ್ಟ ಮೃತನ ರಕ್ತ ಇದ್ದ ಮೂರು ಬಾಟಲಗಳನ್ನು, ಮೃತನ ಒಂದು ಜಾಕೇಟ, ಒಂದು ಪ್ಯಾಂಟ್, ಒಂದು ಬೆಲ್ಟ ನೇದ್ದವುಗಳನ್ನು

ಹಾಜರುಪಡಿಸಿದಾಗ ಜಪ್ತು ಮಾಡಿ ನಿ.ಪಿ.30 ರಂತೆ ಪಂಚನಾಮೆ ತಯಾರಿಸಿ ಓದಿ ಹೇಳಿ ಸಹಿ ಪಡೆದರು ಹಾಗೂ ನಿ.ಪಿ. 31 ಫೋಟೋ ತೆಗೆದುಕೊಂಡರು ಎಂದರೆ ಸರಿಯಲ್ಲ. ಸದರಿ ವಸ್ತುಗಳನ್ನು ಸಾಂಕೇತಿಕವಾಗಿ ಅನುಕ್ರಮವಾಗಿ ಈಗಾಗಲೇ ಮು.ಮಾ.11 ರಿಂದ 16 ಅಂತಾ ಗುರುತಿಸಲಾಗಿದೆ.

2) ಸದರಿ ಎಲ್ಲ ವಿಚಾರ ಗೊತ್ತಿದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ– ಆರೋಪಿತರ ಪರ:– ಏನೂ ಇಲ್ಲ.**

**ಮರು ವಿಚಾರಣೆ** : ಇರುವುದಿಲ್ಲ.

(ಈ ಸಾಕ್ಷಿಯ ಸಾಕ್ಷ್ಯದ ಸಮಯದಲ್ಲಿ 1 ರಿಂದ 5, 7, 8 ನೇ ಆರೋಪಿತನನ್ನು ಕಾರಾಗೃಹದಿಂದ ವಿ.ಸಿ. ಮೂಲಕ ಹಾಜರಪಡಿಸಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.